## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಮದಲೂರು ಹಾಗೂ ಮಾರ್ಗಮಧ್ಯದ ಇತರೆ 11 ಕೆರೆಗಳಿಗೆ ಹೇಮಾವತಿ ನದಿ ನೀರು ಹಾಯಿಸಿ ಅಂತರ್ಜಲ ಮಟ್ಟ ಸುಧಾರಣೆ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ Sustainability ಘಟಕದಡಿ ಅನುದಾನ ಬಿಡುಗಡೆ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂ.ಗ್ರಾಅಪ 88 ಗ್ರಾನೀಸ (4) 09 ದಿ: 7.12.2009.

2. ಸರ್ಕಾರದ ಆದೇಶ ಸಂ.ಗ್ರಾಅಪ 88 ಗ್ರಾನೀಸ (4) 09 ದಿ: 15.04.2011.

3. CEO/ZP ತುಮಕೂರು ರವರ ಪತ್ರ ಸಂ:ಜಿಪಂತು/ಮುಲೇಅ/ಲೇಶಾ/2012-13/232 ದಿನಾಂಕ:31.07.2012 ಮತ್ತು 4/9.08.2012.

**ಪೀಠಿಕೆ:**

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯನ್ನು ಮದಲೂರು ಕೆರೆಗೆ ಜೋಡಣೆ ಮಾಡಿ ಅಲ್ಲಿಂದ ಮದಲೂರು ಕೆರೆ ಸೇರಿದಂತೆ 11 ಕೆರೆಗಳಿಗೆ ಹೇಮಾವತಿ ನದಿನೀರು ಹಾಯಿಸಿ, ಸದರಿ ಕೆರೆ ವ್ಯಾಪ್ತಿಯಲ್ಲಿ ಬರುವ 43 ಗ್ರಾಮಗಳ ಜನಜಾನುವಾರುಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಮತ್ತು ಅಂತರ್ಜಲ ಮರುಪ್ರವಹಿಸುವ ಪರಿಕ್ರಮಗಳ ಸಂಬಂಧ ಸಿದ್ಧಪಡಿಸಲಾಗಿದ್ದ ರೂ.59.88 ಕೋಟಿ ಅಂದಾಜಿನ ಯೋಜನೆಗೆ ಕೇಂದ್ರ ಪುರಸ್ಕೃತ Sustainability ಕಾರ್ಯಕ್ರಮದಡಿ, ದಿನಾಂಕ:7.12.2009ರಲ್ಲಿಯೇ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ:15.04.2011ರ ಉಲ್ಲೇಖಿತ (2)ರ ಆದೇಶದ ಮೇರೆಗೆ 4 ಭಾಗಗಳಾಗಿ ವಿಂಗಡಿಸಿ ಸಿದ್ಧಪಡಿಸಿರುವ ಯೋಜನೆಗೆ Sustainability ಕಾರ್ಯಕ್ರಮದಡಿ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಸಂಬಂಧ Sustainability ಘಟಕದಡಿ ಜಿಲ್ಲಾ ಪಂಚಾಯತ್ ಹಂತದಲ್ಲಿ ಲಭ್ಯವಿದ್ದ ಅನುದಾನವನ್ನು ಸಿಂಡಿಕೇಟ್ ಬ್ಯಾಂಕ್, ಅವೆನ್ಯೂ ರಸ್ತೆ, ಬೆಂಗಳೂರು ಶಾಖೆಗೆ ದಿ:13.04.2011ರಂದು ಜಮಾ ಮಾಡಲಾಗಿದೆ. ಪ್ರಸ್ತುತ ಸದರಿ ಅನುದಾನದ ಪೈಕಿ ರೂ.1000.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು CEO/ZP ತುಮಕೂರುರವರು ಉಲ್ಲೇಖಿತ (3)ರ ಪ್ರಸ್ತಾವನೆಯಲ್ಲಿ ವಿನಂತಿಸಿದ್ದಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ, ಪ್ರಸ್ತುತ Sustainability ಘಟಕದಡಿ ರೂ.1000.00 ಲಕ್ಷಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 88 ಗ್ರಾನೀಸ(4) 2009(ಭಾ) ಬೆಂಗಳೂರು, ದಿನಾಂಕ: 10.08.2012.**

ಪೀಠಿಕೆಯಲ್ಲಿರುವ ವಾಸ್ತವಾಂಶಗಳನ್ನು ಪರಿಶೀಲಿಸಿ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಮತ್ತು ಮದಲೂರು ಹಾಗೂ ಮಾರ್ಗಮಧ್ಯದ ಇತರೆ 11 ಕೆರೆಗಳಿಗೆ ಹೇಮಾವತಿ ನದಿ ಮೂಲಗಳಿಂದ ಸದರಿ ತಾಲ್ಲೂಕಿನ 11 ಕೆರೆಗಳಿಗೆ ನೀರು ಹಾಯಿಸಿ ಮಾರ್ಗಮದ್ಯದ 43 ಗ್ರಾಮಗಳ ಜನಜಾನುವಾರುಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಸಂಬಂಧ Sustainability ಘಟಕದಡಿ **ರೂ.1000.00 ಲಕ್ಷ (ಒಂದು ಸಾವಿರ ಲಕ್ಷ ರೂಪಾಯಿಗಳು ಮಾತ್ರ)**ಗಳನ್ನು ತುಮಕೂರು ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಕೇಂದ್ರ ವಲಯದ ಅನುದಾನವನ್ನು ರಾಜ್ಯಮಟ್ಟದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ SWSM ನ ಮೂಲ ಬ್ಯಾಂಕ್ ಖಾತೆ ಸಂ:04462010091577ರಿಂದ Sustainability ಖಾತೆ ಸಂಖ್ಯೆ:04462010094587ಗೆ ವರ್ಗಾಯಿಸಿ ತುಮಕೂರು ಜಿಲ್ಲಾ ಪಂಚಾಯತ್ ಕಳುಹಿಸುವ ಬಿಲ್‌ಗಳನ್ನು ಸದರಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ ರಾಜ್ಯಮಟ್ಟದಲ್ಲಿ ಕ್ರಮವಹಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಗೊತ್ತು ಪಡಿಸಿರುವ SWSMನ ಬ್ಯಾಂಕ್ Sustainability ಖಾತೆ ಸಂಖ್ಯೆ:04462010094587 ಮುಖೇನ ವಿನಿಯೋಗಿಸತಕ್ಕದ್ದು.

ಸದರಿ ಅನುದಾನ ಬಿಡುಗಡೆ ಹಾಗೂ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು 2012-13ರ ಸಾಲಿನ IMISನಲ್ಲಿ ದಾಖಲಿಸಲು CE/PRED ಹಾಗೂ ಜಿಲ್ಲಾ ಪಂಚಾಯತ್, ತುಮಕೂರು ಕ್ರಮವಹಿಸತಕ್ಕದ್ದು. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಗಳನ್ವಯ ಆಯಾ ಘಟಕವಾರು ವಿನಿಯೋಗಿಸತಕ್ಕದ್ದು.

4. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ IFA ರವರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ:ಗ್ರಾಅಪ 13 ಆಂಅಸ 2012 ದಿ:02.04.2012ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು(ಎಯು-1)ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇವರ ಆಪ್ತ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಬೆಂಗಳೂರು.
9. ವಿಶೇಷಾಧಿಕಾರಿಗಳು(ಜಿಪಂ)ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನಸೌಧ, ಬೆಂ.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಸಂಕೀರ್ಣ,ನಂ55, 4ನೇ ಮಹಡಿ, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂ-20.
12. ಜಿಲ್ಲಾ ಪಂಚಾಯತ್ ಅಧ್ಯಕ್ಷರು, **ತುಮಕೂರು**
13. ಜಿಲ್ಲಾಧಿಕಾರಿಗಳು **ತುಮಕೂರು**
14. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು, **ತುಮಕೂರು.**
15. ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಕಛೇರಿಗಳು, **ಬೆಂಗಳೂರು.**
16. ಕಾರ್ಯಪಾಲಕ ಇಂಜಿನಿಯರ್, ಪಂ. ರಾಜ್ ಇಂಜಿನಿಯರಿಂಗ್ ವಿಭಾಗ, **ತುಮಕೂರು.**
17. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್‌ರ ಕಛೇರಿ, PRED, ಬೆಂಗಳೂರು-20.
18. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ,ಲಲಿತ್ ಮಹಲ್ ರಸ್ತೆ,ಮೈಸೂರು.
19. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
20. ನಿರ್ದೇಶಕರು KRWSSA ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಅಪರ ನಿರ್ದೇಶಕರು ಆರ್ಥಿಕ(ಗ್ರಾಮಸ್ವರಾಜ್) ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ, ಇವರುಗಳ ಆಪ್ತ ಸಹಾಯಕರು.
21. ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್, BWSSB Branch, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂರಸ್ತೆ, ಬೆಂಗಳೂರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5ಪ್ರತಿಗಳು)
24. ರಾಜ್ಯ ಪತ್ರಾಗಾರ ಇಲಾಖೆ(ಬಿಡಿ ಪ್ರತಿ ಶಾಖೆ)
25. ಗ್ರಾ.ಅ.ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ-10ಪ್ರತಿಗಳು.
26. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.